ಸುಬ್ಬಿ: ಏನ್ರೀ ಪುರೋಹಿತರೇ, ನನ್ನ ಗಂಡ ಈ ಪಾಟಿ ಕುಡಿದು ಜಗಳ ಆಡ್ತಾ ಇರ್ತಾನೆ. ನೀವು ಅವ್ರ ಜಾತಕ ಸರಿಯಾಗಿ ನೋಡಿರಲಿಲ್ಲವೇ?

ಪುರೋಹಿತ: ಅಯ್ಯೋ ಸುಬ್ಬಮ್ಮನವರೇ, ಅವತ್ತೇ... ನಾನು ನಿಮ್ಮ ಗಂಡನ ಜಾತಕ ನೋಡಿ ಅವರಿಗೆ 'ಕು. ಜ' ದೋಷ ಇದೆ ಅಂತಾ ಹೇಳಿದ್ದೆ ತಾನೇ?

ಸುಬ್ಬಿ: ಹಾ... ಹೌದು ನೀವು ಹೇಳಿದ್ದು ಜ್ಞಾಪಕ ಬಂತು. ಆದರೆ ಈ 'ಕು.ಜ'ದೋಷ, ಅಂದ್ರೆ ಏನು ಅಂತ ಬಿಡಿಸಿ ಹೇಳಿ–ಸ್ವಾಮಿ.

ಪುರೋಹಿತ: ನಿಮಗೆ ಹೇಗೆ ಹೇಳಲಿ, 'ಕು' ಅಂದ್ರೆ ಕುಡಿದು 'ಜ' ಅಂದ್ರೆ ಜಗಳ ಆಡೋ ದೋಷ ಅಂತ ಕಣಮ್ಮ.

***

ಗುಂಡ: (ಪೇಪರ್ ಓದುತ್ತ) ಲೇ... ಸುಬ್ಬಿ ಇಲ್ಲಿ ನೋಡೇ ಕೊರೊನಾ ಎರಡನೇ ಅಲೆ ಈ ಬಾರಿ ಹಿಂದೆಂದಿಗಿಂತಲೂ ಭೀಕರವಾಗಿ ಅಪ್ಪಳಿಸುತ್ತಿದೆ. ಆದ್ದರಿಂದ ಅದರ ನಿಯಂತ್ರಣಕ್ಕಾಗಿ ಪದೇ ಪದೇ ಕೈ ತೊಳೆದು ಕೊಳ್ತಾ ಇರಿ ಮತ್ತು ದೈಹಿಕ ಅಂತರ ಕಟ್ಟು ನಿಟ್ಟಾಗಿ ಪಾಲಿಸ್ತಾ ಇರಿ ಅಂತಾ ಈ ಸಲ ಸರ್ಕಾರ ಎಚ್ಚರಿಕೆಯನ್ನು ಕೊಟ್ಟಿದೆ.

ಸುಬ್ಬಿ: ಹಾ... ಒಳ್ಳೇದೇ ಹೇಳಿದ್ದಾರೆ. ನೀವು ಸುಮ್ಮನೆ ಕೈ ತೊಳೆಯುವ ಬದಲು ಮನೇಲಿ ಆಗಾಗ ಪಾತ್ರೆಗಳನ್ನಾದ್ರೂ ತೊಳೆದಿಡಿ. ರಾತ್ರಿ ವರಾಂಡದಲ್ಲಿ ಮಲಗಿ.

***

ಗುಂಡ: ಡಾಕ್ಟ್ರೇ ನೀವು– ನನ್ನ ಒಂದ್ ಹಲ್ಲು ಕೀಳೋದಕ್ಕೆ ಒಂದು ಸಾವಿರ ರೂಪಾಯಿ ಬಿಲ್ ಮಾಡಿದೀರಿ?

ಡಾಕ್ಟರ್: ( ಕೋಪದಿಂದ) ಅರೇ ಸುಮ್ನಿರಯ್ಯ ಸಾಕು. ನಾನು ನಿನ್ನ ಹಲ್ಲು ಕೀಳುವಾಗ ನೀನು ಜೋರಾಗಿ ಕಿರುಚಿಕೊಂಡಿದ್ದು ಕೇಳಿ ಹೊರಗಡೆ ಕಾಯ್ತಾ ಇದ್ದ ನನ್ನ ಎಂಟು ರೋಗಿಗಳು ಹೆದರಿಕೊಂಡು ಓಡಿ ಹೋಗಿದ್ದಾರೆ.

***

ಗುಂಡ: ಸುಬ್ಬಿ ಅಂತೂ ಇವತ್ತು ನನಗೆ 18 ವರ್ಷ ತುಂಬಿತು ಕಣೇ.

ಸುಬ್ಬಿ: ಹೌದಾ? ನನಗೂ ಇವತ್ತೇ 18 ವರ್ಷ ಆಯ್ತು ಕಣೋ.

ಗುಂಡ: ಹೌದಾ? ಒಳ್ಳೇದೇ ಆಯ್ತು, ಹಾಗಾದ್ರೆ ನಡಿ, ಬೇಗ ಹೋಗಿ ಬಿಡೋಣ.

ಸುಬ್ಬಿ: ಅಯ್ಯೋ ಎಲ್ಲಿಗೆ? ಇವತ್ತೇನಾ?

ಗುಂಡ: ಪೆದ್ದಿ, ಇನ್ನೆಲ್ಲಿಗೆ? ವೋಟ್ ಮಾಡೋ ಬೂತಿಗೆ.

***

ಸುಬ್ಬಿ: ರೀ, ಬ್ಯುಟೀಪಾರ್ಲರ್‌ಗೆ ಹೋಗಿದ್ದೆ, ಹೇಗೆ ಕಾಣ್ತೇನಿ ಹೇಳ್ರಿ?

ಗುಂಡ: ಥೂ, ನಿನ್ನ ಮುಸುಡಿ ನೋಡಿ ಬೆಚ್ಚಿ ಬಿದ್ದೆ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಯಾವನೋ ಸ್ವಾಮೀಜಿಗೆ ಭಿಕ್ಷೆ ಹಾಕಿ ಕಳಿಸಿದ್ದೆ, ಮತ್ತೆ ಅವನೇ ಬಂದ್ನೇನೋ ಅಂದುಕೊಂಡಿದ್ದೆ.

***

ಡಾಕ್ಟರ್: ನಿಮಗೆ ತುಂಬಾ ಗ್ಯಾಸ್ ಪ್ರಾಬ್ಲಮ್ ಇದೆ ಸ್ವಲ್ಪ ಹುಷಾರಾಗಿ ಇರಬೇಕು.

ಗುಂಡ: ಅಯ್ಯೋ, ಏನಂತ ಹೇಳಲಿ ಡಾಕ್ಟ್ರೇ ಗ್ಯಾಸ್ ಬುಕ್ ಮಾಡಿ ಹನ್ನೆರಡು ದಿನ ಅಗ್ತಾ ಬಂತು. ಆ ನನ್ನ ಮಗ ಇನ್ನೂ ಸಿಲಿಂಡರ್ ಡೆಲಿವರಿ ಮಾಡೇ ಇಲ್ಲ.

***

ಗುಂಡ: ಲೇ, ಸುಬ್ಬಿ ನೀನು ಹುಟ್ಟಿದ್ದು ಯಾವ ಡೇಟ್ ಅಂತಾ ಹೇಳು. ಬೇಕಾದ್ರೆ ವರ್ಷ ನೀನೇನು ಹೇಳ ಬೇಡ?

ಸುಬ್ಬಿ: ಅಯ್ಯೋ ಅಷ್ಟೇ ತಾನೇ ನಾನು ಹುಟ್ಟಿದ್ದು ಮಾರ್ಚ್ 31 ರಂದು.

ಗುಂಡ: ಛೆ.. ಛೇ... ನೀನು ಒಂದು ದಿನ ಆದ ಮೇಲೆ ಹುಟ್ಟಿದ್ರೆ ಭಾರಿ ಹೆಸರು ಮಾಡಿ ಬಿಡ್ತಾ ಇದ್ದೆ. ಯಾಕೆ ಅಂದ್ರೆ ಹೊಸ ಹಣಕಾಸಿನ ವರ್ಷ ಜೊತೆಗೆ ಏಪ್ರಿಲ್ 1 ಬೇರೆ. ಸದ್ಯ ಮಿಸ್ ಮಾಡ್ಕೊಂಡೆ.

***

(ಗುಂಡನನ್ನು ಅರೆ ಬೆತ್ತಲೆ ಸ್ಥಿತಿಯಲ್ಲಯೇ ಕೋರ್ಟ್‌ಗೆ ಹಾಜರುಪಡಿಸಿದ್ದರು)

ನ್ಯಾಯಾಧೀಶ: ನಿನಗೆ ಮದುವೆ ಆಗಿದಿಯೇ?

ಗುಂಡ: ಹೌದು ಮಹಾ ಸ್ವಾಮಿ...

ನ್ಯಾಯಾಧೀಶ: ಎಷ್ಟು ಮಕ್ಕಳು.

ಗುಂಡ: 13 ಮಕ್ಕಳು ಯುವರ್ ಹಾನರ್.

ನ್ಯಾಯಾಧೀಶ: ಗೊತ್ತಾಯ್ತು ಬಿಡು! ಪಾಪ ನಿನಗೆ ಮೈ ಮೇಲೆ ಬಟ್ಟೆ ಹಾಕಿಕೊಳ್ಳಲೂ ಸಹ ಸಮಯ ಇಲ್ಲ. ನಿನ್ನನ್ನು ಬಿಡುಗಡೆ ಮಾಡಿದ್ದೇನೆ.

***




ಡಾಕ್ಟರ್: ಕೊರೊನಾ ಅಬ್ಬರ ಮುಗಿಯುತ್ತ ಬಂದರೂ ನೀನು ತುಂಬಾ ಸೊರಗಿ ಹೋಗ್ತಾ ಇದ್ದೀಯ?

ಗುಂಡ: ಹೌದು ಡಾಕ್ಟ್ರೇ.

ಡಾಕ್ಟರ್: ಅಂತಹದ್ದು ಏನಾಗಿದೆ ನಿನಗೆ?

ಗುಂಡ: ಆಗಾಗ ಮೂರ್ಛೆ ಹೋಗುತ್ತೇನೆ ಡಾಕ್ಟರ್.

ಡಾಕ್ಟರ್: ಈ ಮೊದಲು ಇದೇ ರೀತಿ ಆಗ್ತಾ ಇತ್ತಾ?

ಗುಂಡ: ಮೊದಲ ಅಲೆಯಲ್ಲಿ ನಮ್ಮ ತಂದೆಗೆ ಕೊರೊನಾ ಬಂದಾಗ ತೋರಿಸಲು ನಿಮ್ಮ ಹತ್ರ ಬಂದಾಗ ನೀವು ಕೊಟ್ಟ ಬಿಲ್ಲು ನೋಡಿ ಮೊದಲ ಬಾರಿಗೆ ಮೂರ್ಛೆ ಬಂದಿತ್ತು ಡಾಕ್ಟ್ರೇ.

ಸುಬ್ಬಿ: (ಮಗಳಿಗೆ) ನೋಡು ನೀನು ರಾತ್ರಿ ಎಂಟು ಗಂಟೆಯ ಒಳಗೆ ಮನೆಗೆ ಬಂದು ಇರಬೇಕು. ಗೊತ್ತಾಯ್ತಾ?

ಮರಿ ಸುಬ್ಬಿ: ಇದೊಳ್ಳೆ ಕಥೆಯಾಯಿತು. ನಾನೇನು ಚಿಕ್ಕ ಮಗುವೇ?

ಸುಬ್ಬಿ: ಅದಕ್ಕೇ ಹೇಳಿದ್ದು, ರಾತ್ರಿ ಎಂಟು ಗಂಟೆಯ ಒಳಗೇ ಮನೇಲಿ ಇರಬೇಕೂ ಅಂತಾ.

***

ಗುಂಡ: ನಿಮ್ಮ ಹೋಟೆಲ್ ಲಾಡ್ಜ್ ರೂಮುಗಳು ಎಲ್ಲ ರೀತಿಯಲ್ಲಿ ಅನುಕೂಲಕರವಾಗಿ ಇವೆಯೇ?

ಮ್ಯಾನೇಜರ್: ಖಂಡಿತಾ ಸರ್, ನೀವು ಇಲ್ಲಿ ತಂಗಿದ್ದರೆ ನಿಮ್ಮ ಮನೆಯಲ್ಲಿಯೇ ಇದ್ದೀರೋ ಅನ್ನೋ ಹಾಗೆ ಅನುಭವ ಆಗುತ್ತೆ.

ಗುಂಡ: ಇಲ್ಲೂ ಅದೇ ರೀತಿಯ ಕಿರಿಕಿರಿಗಳೇ? ಹಾಗಾದರೆ ಬೇಡ ಬಿಡಪ್ಪ, ನಾನು ನಮ್ಮ ಮನೆಗೇ ಹೋಗ್ತೀನಿ.

***

ಸುಬ್ಬಿ: ಡಾಕ್ಟರ್ ನೋಡಿ ನನ್ನ ತಲೆ ಕೂದಲುಗಳೆಲ್ಲ ಉದುರಿ ಹೋಗ್ತಾ ಇವೆ.

ಡಾಕ್ಟರ್: ನೋಡಮ್ಮಾ, ತುಂಬಾ ಚಿಂತೆ ಮಾಡುವುದರಿಂದಲೂ ಕೂದಲು ಉದುರಿ ಬಿಡುತ್ತವೆ ಅಂದ ಹಾಗೆ ನೀವು ಯಾಕೆ ಚಿಂತೆ ಮಾಡ್ತೀರಿ?

ಸುಬ್ಬಿ: ಪ್ರತಿ ದಿನವೂ ಇಷ್ಟೊಂದು ಕೂದಲು ಉದುರುತ್ತೆ ಅನ್ನೋದೇ ನನ್ನ ಚಿಂತೆ ಡಾಕ್ಟ್ರೇ.

***

(ಕೊರೊನಾ ಟೈಮಿನಲ್ಲಿ ಗುಂಡನಿಗೆ ಸೀರಿಯಸ್ ಆಗಿ ICUನಲ್ಲಿ ಹಾಕಿ ಬಿಟ್ಟಿದ್ದರು. ಹೆಂಡತಿಯ ಕೈ ಹಿಡಿದುಕೊಂಡು ಹೇಳಿದ)

ಗುಂಡ: ನೋಡು ನಾನೇನಾದರೂ ಅಕಸ್ಮಾತ್ ಗೊಟಕ್ ಅಂದು ಬಿಟ್ರೆ. ನೀನು ನನ್ನ ಒಂದು ಮಾತು ಮರೀದೇ ನೆಡಸಿ ಕೊಡಬೇಕು.

ಸುಬ್ಬಿ: (ಅಳುತ್ತಾ) ಯಾಕ್ರೀ ಹೀಗೆಲ್ಲಾಮಾತಾಡ್ತೀರಿ? ಹೋಗ್ಲಿ, ಹೇಳಿ ನಾನು ಏನು ಮಾಡಬೇಕು?

ಗುಂಡ: ಈ ನನ್ನ ಮಗ ಡಾಕ್ಟ್ರು ಒಂದು ವಾರದಿಂದ ನನಗೆ ಭಾಳ ಭಾಳ ತೊಂದ್ರೆಕೊಡ್ತಾ ಇದ್ದಾನೆ. ಆದ್ರಿಂದ ನೀನು ಅವನನ್ನೇ ಮರು ಮದುವೆ ಮಾಡ್ಕೋ, ಬಡ್ಡಿ ಮಗ ಸಾಯೋ ತನಕ ನರಕ ಅನುಭವಿಸಲಿ.

***

ಸುಬ್ಬಿ: ರೀ ಇವತ್ತು ನಮ್ಮ ಫ್ಯಾಮಿಲಿ ಡಾಕ್ಟರ್ ಬಳಿ ಹೋಗಿದ್ದೆ. ಅದಕ್ಕೆ ಅವರು ನಿಮಗೆ ಸ್ಥಳ ಬದಲಾವಣೆಯ ಅಗತ್ಯ ಇದೆ ಅಂದ್ರು. ನಾನು ಎಲ್ಲಿಗೆ ಹೋದ್ರೆ ಒಳ್ಳೆದು ಅಂತ ಹೇಳ್ತೀರಾ?

ಗುಂಡ: ಅಷ್ಟೇನಾ, ಸ್ಥಳ ಬದಲಾವಣೆ ಆಗ್ಬೇಕು ಅಂದ್ರಾ? ಸರಿ ಬಿಡು. ನಾಳೆಯಿಂದ ಬೇರೆ ಡಾಕ್ಟರ್ ಹತ್ರ ಹೋಗಿ ತೋರಿಸ್ಕೊ.

ಸಂಗ್ರಹ: ಆರ್. ವೀರೇಶ್ ಕುಮಾರ್ ಬೆಂಗಳೂರು